ಇ) ಆದಷ್ಟು ಜಾಗ್ರತೆಯಾಗಿ ಪೂರ್ಣಗೊಳಿಸಲಾಗುವುದು.

ಈ) ಈ ಯೋಜನೆಯಡಿಯಲ್ಲಿ ಗುರುತಿಸಲಾದ ಕಾಮಗಾರಿಗಳು ಪೂರ್ಣಗೊಂಡಾಗ ಮಾರುಕಟ್ಟೆಯನ್ನು ಹಳೆಯ ಯಾರ್ಡಿನಿಂದ ಹೊಸ ಯಾರ್ಡಿಗೆ ಸ್ಥಳಾಂತರಿಸಲು ಸಾಧ್ಯ.

ಸಂಜಯ ಸಹಕಾರಿ ನೂಲಿನ ಗಿರಣಿ, ಹುಬ್ಬಳ್ಳಿ ಇದಕ್ಕೆ ತಾಂತ್ರಿಕ ಮಂಜೂರಾತಿ

682 - ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) *1984ರಲ್ಲಿ ಸಚಿವ ಸಂಪುಟವು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಬೇಕಾಗಿದ್ದ ಸಂಜಯ ಸಹಕಾರಿ ನೂಲಿನ ಗಿರಣಿಗೆ ತನ್ನ ಒಪ್ಪಿಗೆಯನ್ನು ನೀಡಿದ್ದರೂ ಸಹ ಇದುವರೆವಿಗೂ ಗಿರಣಿಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದಿಂದ ಹಣಕಾಸಿನ ಹಾಗೂ ತಾಂತ್ರಿಕ ಮಂಜೂರಾತಿ ನೀಡದಿರಲು ಕಾರಣಗಳೇನು?*

ಆ) *ಈ ನೂಲಿನ ಗಿರಣಿಯನ್ನು ಪ್ರಾರಂಭಿಸುವ ಸಲುವಾಗಿ 1982 ರಲ್ಲಿ ನೊಂದಣಿ ಮಾಡಿದ್ದು ಇದಕ್ಕೆ ಅಗತ್ಯವಿರುವ ಶೇರು ಬಂಡವಾಳವನ್ನು ರೈತರುಗಳಿಂದ ಸಂಗ್ರಹಿಸಿ ಹಲವಾರು ವರ್ಷಗಳು ಕಳೆದಿದ್ದರೂ ಗಿರಣಿಯ ಪ್ರಾರಂಭಕ್ಕೆ ತಾಂತ್ರಿಕ ಹಾಗೂ ಹಣಕಾಸಿನ ಮಂಜೂರಾತಿಯನ್ನು ನೀಡದೇ ಇರುವುದರಿಂದ ತಾಲ್ಲೂಕಿನ ರೈತರುಗಳಿಗೆ ತೊಂದರೆಯಾಗಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?*

ಇ) *ಹಾಗಿದ್ದಲ್ಲಿ ಸರ್ಕಾರ ಆದಷ್ಟು ಬೇಗ ಈ ನೂಲಿನ ಗಿರಣಿಗೆ ತಾಂತ್ರಿಕ ಮತ್ತು ಹಣಕಾಸಿನ ಮಂಜೂರಾತಿಯನ್ನು ನೀಡಲು ಕ್ರಮ ಕೈಗೊಳ್ಳುತ್ತದೆಯೇ?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು).

ಅ) ಸದರಿ ಪ್ರಸ್ತಾವನೆಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನವದೆಹಲಿ ಇವರಿಂದ ಅಂಗೀಕಾರ ದೊರೆತಿರುವುದಿಲ್ಲದಿರುವುದೇ ಕಾರಣ.

ಆ) ಹೌದು.

ಇ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ನವದೆಹಲಿ ಇವರಿಂದ ಅಂಗೀಕಾರ ದೊರೆತ ನಂತರ ವಿಷಯವನ್ನು ಪರಿಶೀಲಿಸಿ ಆದಷ್ಟು ಬೇಗ ಕ್ರಮ ಜರುಗಿಸಲಾಗುವುದು.

ಹೋಟೆಲ್ ತಿಂಡಿ ಬೆಲೆ ಇಳಿಸುವ ಬಗ್ಗೆ

494 - ಶ್ರೀ ವಾಟಾಳ್ ನಾಗರಾಜ್. (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೋಟೆಲ್ ತಿಂಡಿ ಬೆಲೆ ಏರಿರುವುದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಹೋಟೆಲ್ ತಿಂಡಿ ಬೆಲೆಗಳನ್ನು ಇಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು ಬಂದಿದೆ.

ಆ) ರಾಜ್ಯದಲ್ಲಿ ನಗರ, ಪಟ್ಟಣ ಮತ್ತು ಇತರ ಸ್ಥಳಗಳಲ್ಲಿರುವ ಹೋಟೆಲು ಮತ್ತು ಉಪಹಾರ ಮಂದಿರಗಳು ಸರ್ಕಾರದಿಂದ ನಿಯಂತ್ರಿತ ದರಗಳಲ್ಲಿ ಅಕ್ಕಿ, ಗೋಧಿ, ಸಕ್ಕರೆ ಮತ್ತು ಇತರ ಆಹಾರ ಧಾನ್ಯಗಳನ್ನು ಈಗ ಸದ್ಯದಲ್ಲಿ ಕೊಳ್ಳುತ್ತಿಲ್ಲ. ಇದರ ಬದಲಾಗಿ ಅವುಗಳು ಮುಕ್ತ ಮಾರುಕಟ್ಟೆಯಲ್ಲಿ ಚಾಲ್ತಿ ಇರುವ ದರಗಳನ್ನು

ನೀಡಿ ಮಾರುಕಟ್ಟೆಯಿಂದಲೇ ಕೊಳ್ಳುತ್ತವೆ. ಆದುದರಿಂದ ಹೋಟೇಲುಗಳಲ್ಲಿ ನೀಡಲಾಗುತ್ತಿರುವ ಆಹಾರ ಪದಾರ್ಥಗಳ ಬೆಲೆಗಳನ್ನು ಸ್ವೇಚ್ಛೆಯಾಗಿ ನಿಯಂತ್ರಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಸರಿಯಾಗುವುದಿಲ್ಲವೆಂದು ತೋರುತ್ತದೆ. ಹಾಗೇನಾದರೂ ಮಾಡಿದ್ದರೆ, ಆಹಾರ ಪದಾರ್ಥಗಳು ಗುಣಮಟ್ಟ ಕೆಡುವುದಲ್ಲದೇ ಹಲವಾರು ಹೋಟೆಲುಗಳನ್ನು ಮುಚ್ಚುವ ಪ್ರಸಂಗ ಬರುವುದರಿಂದ ದೊಡ್ಡ ಪ್ರಮಾಣದಲ್ಲಿರುವ ಅಶಿಕ್ಷಿತ ಜನರನ್ನು ಉದ್ಯೋಗದಿಂದ ಹೊರದೂಕಿದಂತಾಗುತ್ತದೆ. ವಾಸ್ತವಿಕವಾಗಿ ವಿವಿಧ ತರಹದ ಹೋಟೆಲು ಹಾಗೂ ಉಪಹಾರ ಗೃಹಗಳಲ್ಲಿಯ ಆಹಾರದ ಪದಾರ್ಥಗಳ ಬೆಲೆಗಳನ್ನು ಪೂರೈಕೆ-ಬೇಡಿಕೆಗಳ ಅರ್ಥ ನಿಯಮವು ನಿಯಂತ್ರಿಸುತ್ತದೆ. ಅಗ್ಗ ಬೆಲೆಯ ಆಹಾರ ಪದಾರ್ಥಗಳಿಗೆ ಶಕ್ತವಾಗಿರುವವರು ಅಷ್ಟೇ ಬೆಲೆಯಲ್ಲಿ ಸಿಗುವ ಹೋಟೆಲುಗಳಿಗೆ ಹೋಗುತ್ತಾರೆ. ಆದುದರಿಂದ ವಿವಿಧ ಹೋಟೇಲುಗಳು ಹಾಗೂ ಉಪಹಾರ ಗೃಹಗಳಲ್ಲಿ ಸರಬರಾಜಾಗುತ್ತಿರುವ ತಿಂಡಿ ಪದಾರ್ಥಗಳ ಬೆಲೆಗಳನ್ನು ನಿಯಂತ್ರಿಸುವುದು ಯುಕ್ತವಾಗಲೀ ಅಥವಾ ವಿವೇಚನಾತ್ಮಕವಾಗಲಿ ಆಗುವುದಿಲ್ಲ. ಇದಲ್ಲದೇ ಹೋಟೆಲು ಮತ್ತು ಉಪಹಾರ ಗೃಹಗಳನ್ನು ಈಗ ಕೈಗಾರಿಕೆಗಳೆಂದಾಗಿ ಪರಿಗಣಿಸಲ್ಪಟ್ಟಿವೆ. ಆದುದರಿಂದ ಲಾಭ ಮತ್ತು ನಷ್ಟ ಆಧಾರದ ಮೇರೆಗೆ ವ್ಯಾವಹಾರಿಕವಾಗಿ ನಿರ್ವಹಿಸಬೇಕಾಗುತ್ತದೆ.

ಇನ್ನು ಹೋಟೆಲು ಮತ್ತು ಉಪಹಾರ ಗೃಹಗಳಲ್ಲಿರುವ ಆರೋಗ್ಯ ಸೂತ್ರಗಳ ಬಗೆಗೆ ಹೇಳಬೇಕೆಂದರೆ ಇವುಗಳು ಸ್ಥಾಯುತ್ತತ ಸಂಸ್ಥೆಗಳಾದಂತಹ ನಗರಸಭೆ ಮತ್ತು ಪುರಸಭೆಗಳಿಗೆ ಒಳಪಡುತ್ತದೆ. ಹೋಟೆಲು ಮತ್ತು ಉಪಹಾರ ಮಂದಿರಗಳಲ್ಲಿಯ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಕ್ರಮ ಕೈಗೊಳ್ಳಬೇಕೆಂದು, ನಗರಸಭೆ ಮತ್ತು ಪುರಸಭೆಗಳ ಆರೋಗ್ಯ ಶಾಖೆಗಳನ್ನು ಸರ್ಕಾರದ ಆಡಳಿತಾತ್ಮಕ ಇಲಾಖೆಯ ಮೂಲಕ ಕೋರಲಾಗುವುದು.

ವನ್ಯ ಮೃಗಗಳ ಸಂರಕ್ಷಣೆ

498 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವನ್ಯ ಮೃಗಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಕರ್ನಾಟಕ ಅರಣ್ಯ ಪ್ರದೇಶಗಳಲ್ಲಿ ಇರುವ ಆನೆಗಳ, ಹುಲಿಗಳ ಸಂಖ್ಯೆ ಎಷ್ಟು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ವನ್ಯ ಮೃಗಗಳ ಸಂರಕ್ಷಣೆಗಾಗಿ ಸರ್ಕಾರವು 19 ವನ್ಯಧಾಮಗಳನ್ನು ಮತ್ತು 5 ರಾಷ್ಟ್ರೀಯ ಉದ್ಯಾನವನಗಳನ್ನು ಘೋಷಿಸಿದೆ. ಈ ಅಭಯಾರಣ್ಯಗಳಲ್ಲಿ ಕಾಡುಪ್ರಾಣಿ ಹತ್ಯೆ ನಿಷಿದ್ಧ ಮತ್ತು ಯಾವ ತರಹದ ಅರಣ್ಯ ಕಾಮಗಾರಿಗಳನ್ನು ಮಾಡುವುದು ನಿಷಿದ್ಧ. ಸರ್ಕಾರ ಜಾರಿಗೊಳಿಸಿದ ವನ್ಯಪ್ರಾಣಿ ಸಂರಕ್ಷಣೆ ಕಾಯಿದೆ 1972 ಮತ್ತು 1973ರ ಪ್ರಕಾರ ಯಾವುದೇ ಕಾಡುಪ್ರಾಣಿಯನ್ನು ಕೊಲ್ಲುವುದು ನಿಷಿದ್ಧ ಹಾಗೂ ದಂಡನಾರ್ಹ. ಕೇಂದ್ರ ಸರ್ಕಾರದ ಸೂಚನೆಯಂತೆ ಎಲ್ಲಾ ಅಭಯಾರಣ್ಯಗಳ ಮತ್ತು ರಾಷ್ಟ್ರೀಯ ಉದ್ಯಾನವನಗಳ ಉಸ್ತುವಾರಿಗಾಗಿ ಪ್ರತ್ಯೇಕವಾಗಿ ಒಂದು ವನ್ಯ ಪ್ರಾಣಿ ವಿಭಾಗವನ್ನು ನಿಯಮಿಸಿದ್ದು ಒಬ್ಬ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರನ್ನು ಇದರ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಅಭಯಾರಣ್ಯಗಳಲ್ಲಿ ಕಾಡುಪ್ರಾಣಿಗಳ ರಕ್ಷಣೆ ಮತ್ತು ಅವುಗಳ ಪರಿಸರ ಸಂರಕ್ಷಣೆಗೆ ವರ್ಷಕ್ಕೆ ಸರಾಸರಿ 425 ಲಕ್ಷ ರೂ.ಗಳನ್ನು ವ್ಯಯ ಮಾಡುತ್ತಿದ್ದು ಕಾಡುಪ್ರಾಣಿಗಳು ನಿರ್ಭೀತಿಯಿಂದ ತಮ್ಮ ಸಂತತಿ ವೃದ್ಧಿಗೊಳಿಸಲು ನೆರವಾಗುತ್ತಿವೆ. ಇದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡರಿಂದಲೂ ಧನ ಸಹಾಯ ನೀಡಲಾಗುತ್ತಿದೆ.

ಆ) ತಃಪ್ತೆ ಲಗತ್ತಿಸಲಾಗಿದೆ.